48123/D0230

Reg. No.

## IV Semester B.Com. (NEP) Degree Examination, August/September - 2024
## BUSINESS REGULATORY FRAME WORK
### Paper : DSC-2.3
### *(Regular)*

**Time : 2 Hours** **Maximum Marks : 60**

### SECTION - A
### ವಿಭಾಗ - ಅ

**Answer any FIVE of the following.** **(5×2=10)**

ಬೇಕಾದ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.

1\. a) What is contract ?

ಒಪ್ಪಂದ ಎಂದರೇನು ?

b) Define contract of sale.

ವಿಕ್ರಯ ಶಾಸನದ ವ್ಯಾಖ್ಯೆ ನೀಡಿರಿ.

c) State any two features of Competition Act.

ಸ್ಪರ್ಧಾ ಕಾನೂನಿನ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.

d) Who is consumer ?

ಗ್ರಾಹಕನೆಂದರೆ ಯಾರು ?

e) Mention any two types of environment pollution.

ಪರಿಸರ ಮಾಲಿನ್ಯದ ಯಾವುದಾದರೂ ಎರಡು ಪ್ರಕಾರಗಳನ್ನು ಬರೆಯಿರಿ.

f) What do you mean by cyber espionage ?

ಸೈಬರ್ ಬೇಹುಗಾರಿಕೆ ಎಂದರೇನು ?

g) Mention any two objectives of FEMA-1999.

ಫೆಮಾ ಕಾಯ್ದೆ 1999 ರ ಯಾವುದಾದರೂ ಎರಡು ಉದ್ದೇಶಗಳನ್ನು ತಿಳಿಸಿ.

[P.T.O.

KLE College of Commerce Belagavi

## SECTION-B

ವಿಭಾಗ - ಬ

**Answer any THREE of the following questions.** **(3×5=15)**

ಬೇಕಾದ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.

2. Distinguish between offer and acceptance.
   ಪ್ರಸ್ತಾಪ ಮತ್ತು ಒಪ್ಪಿಗೆಗಳ ನಡುವಿನ ವ್ಯತ್ಯಾಸವನ್ನು ತಿಳಿಸಿರಿ.
3. Explain briefly objectives of competitive Act.
   ಸ್ಪರ್ಧಾ ಕಾನೂನಿನ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
4. What IPR ? Explain the reasons for protection and promotion of intellectual property.
   ಬೌದ್ಧಿಕ ಆಸ್ತಿ ಹಕ್ಕು ಎಂದರೇನು ? ಬೌದ್ಧಿಕ ಆಸ್ತಿಗಳ ರಕ್ಷಣೆ ಮತ್ತು ಉತ್ತೇಜನಕ್ಕೆ ಕಾರಣಗಳನ್ನು ವಿವರಿಸಿರಿ.
5. List out the features of cyber law.
   ಸೈಬರ್ ಕಾನೂನಿನ ಲಕ್ಷಣಗಳನ್ನು ತಿಳಿಸಿರಿ.
6. State the powers of central government to protect environment in India.
   ಭಾರತದಲ್ಲಿ ಪರಿಸರ ಸಂರಕ್ಷಣೆಯಲ್ಲಿ ಕೇಂದ್ರ ಸರಕಾರದ ಅಧಿಕಾರಗಳನ್ನು ತಿಳಿಸಿರಿ.

## SECTION-C

ವಿಭಾಗ - ಕ

**Answer any TWO of the following.** **(2×10=20)**

ಬೇಕಾದ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.

7. Explain the essential elements of valid contract.
   ಊರ್ಜಿತ ಒಪ್ಪಂದದ ಆವಶ್ಯಕ ಅಂಶಗಳನ್ನು ವಿವರಿಸಿರಿ.
8. Who is unpaid seller ? Explain the rights of unpaid seller.
   ಸಂದಾಯವಾಗದ ಮಾರಾಟಗಾರನೆಂದರೆ ಯಾರು ? ಸಂದಾಯವಾಗದ ಮಾರಾಟಗಾರನ ಹಕ್ಕುಗಳನ್ನು ವಿವರಿಸಿರಿ.
9. Discuss the rights of consumer as per consumer protection Act 1986.
   ಗ್ರಾಹಕರ ಹಿತರಕ್ಷಣಾ ಕಾಯ್ದೆ - 1986 ರ ಪ್ರಕಾರ ಗ್ರಾಹಕರ ಹಕ್ಕುಗಳನ್ನು ಚರ್ಚಿಸಿರಿ.
10. Explain the duties and powers of Competition Commission of India as per U/s 18 of the Competition Commission of Indian Act 2002.
    ಭಾರತೀಯ ಮಾರುಕಟ್ಟೆ ಸ್ಪರ್ಧಾ ಆಯೋಗ ಕಾಯ್ದೆ - 2002 ರ ಪರಿಚ್ಛೇದ 18 ರ ಅಡಿಯಲ್ಲಿ ಸೂಚಿಸಲಾದ ಪೈಪೋಟಿ ಆಯೋಗದ ಅಧಿಕಾರ ಮತ್ತು ಕರ್ತವ್ಯಗಳನ್ನು ವಿವರಿಸಿರಿ.

KLE College of Commerce Belagavi

## SECTION-D

## ವಿಭಾಗ - ಡ

**Compulsory (Case Study)** **(1×15=15)**

ಕಡ್ಡಾಯ ಪ್ರಶ್ನೆ (ಪ್ರಕರಣ ಅಧ್ಯಯನ)

**11.** a) Ajay invites Vijay to a dinner at his house. Vijay accept the offer. Ajay by spending a lot of money makes grand arrangements for the dinner. But Vijay fails to attend the dinner. Can Ajay recover the loss sustained by filing a case against Vijay ?

'ಅಜಯ'ನು ವಿಜಯನಿಗೆ ತನ್ನ ಮನೆಗೆ ಊಟಕ್ಕೆ ಆಮಂತ್ರಣ ನೀಡುತ್ತಾನೆ. 'ವಿಜಯ'ನು ಆಮಂತ್ರಣದ ಪ್ರಸ್ತಾಪವನ್ನು ಒಪ್ಪಿಕೊಳ್ಳುತ್ತಾನೆ. 'ಅಜಯ'ನು ಬಹಳಷ್ಟು ಹಣವನ್ನು ಖರ್ಚು ಮಾಡಿ ಊಟಕ್ಕೆ ವ್ಯವಸ್ಥೆ ಮಾಡಿಸಿರುತ್ತಾನೆ. ಆದರೆ 'ವಿಜಯ'ನು ಊಟಕ್ಕೆ ಹೋಗುವುದನ್ನು ತಪ್ಪಿಸುತ್ತಾನೆ. 'ಅಜಯ'ನು ತನಗಾದ ಹಾನಿಯನ್ನು ನ್ಯಾಯಾಲಯದಲ್ಲಿ 'ವಿಜಯ'ನ ವಿರುದ್ಧ ದಾವೆ ಹೂಡಿ ವಸೂಲ ಮಾಡಬಹುದೇ ? ನಿಮ್ಮ ಅಭಿಪ್ರಾಯ ತಿಳಿಸಿ.

b) Musaveer sells his car to Mahaveer knowing fully well that their car-engine was defective. Musaveer does not disclose this defect to Mahaveer. Is the sale is valid ? Comment.

ಕಾರಿನ ಯಂತ್ರ ದೋಷಪೂರಿತವಾಗಿದ್ದದ್ದು ಪೂರ್ಣ ಅರಿವಿದ್ದೂ ಮುಸಾವೀರ ತನ್ನ ಕಾರನ್ನು ಮಹಾವೀರನಿಗೆ ಮಾರುತ್ತಾನೆ. ಮುಸಾವೀರ ಇದನ್ನು ಮಹಾವೀರನಿಗೆ ಬಹಿರಂಗಪಡಿಸುವುದಿಲ್ಲ. ಮಾರಾಟ ಒಪ್ಪಂದ ಊರ್ಜಿತವಾಗಿದೆಯೇ ? ಚರ್ಚಿಸಿರಿ.

c) A girl of 15 years obtains a loan of Rs.70,000 from a money lender. She fails to repay the loan. Can the money lender file a suit against the girl to recover the amount of the loan ? Give opinion.

ಹದಿನೈದು ವರ್ಷದ ಹುಡುಗಿಯೊಬ್ಬಳು, ಒಬ್ಬ ಸಾಹುಕಾರನಿಂದ ರೂ. 70,000 ಹಣದ ಸಾಲವನ್ನು ಪಡೆಯುತ್ತಾಳೆ. ಅವಳು ಸಾಲ ಮರುಪಾವತಿಸಲು ವಿಫಲಳಾಗುತ್ತಾಳೆ. ಆ ಸಾಹುಕಾರನು ಅವಳಿಂದ ಸಾಲ ವಸೂಲಿ ಮಾಡಲು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಬಹುದಾ ? ಅಭಿಪ್ರಾಯ ತಿಳಿಸಿ.

---

KLE College of Commerce Belagavi